

# ಗಿಟಾರ್ ಹೀರೊ!

ಥಾಯ್ಲೆಂಡ್‌ನ ಸಂತಿಸಾಕ್ ಡುಲ್‌ಪಿತಕ್‌ಗೆ ಸಿನಿಮಾ ನಟರಿಗೆ ನಿರ್ದೇಶನ ನೀಡುವುದಕ್ಕಿಂತ ಪ್ರಾಣಿಗಳಿಗೆ ನಿರ್ದೇಶನ ನೀಡುವುದೆಂದರೆ ಅಚ್ಚುಮೆಚ್ಚು. ಸಾಕುಪ್ರಾಣಿಗಳಿಗೆ ಮಾತ್ರವಲ್ಲ, ಕಾಡಿನಲ್ಲಿರುವ ಪ್ರಾಣಿಗಳನ್ನೂ ತಂದು ಹಾಗೆ ತಿದ್ದಿ, ಹೀಗೆ ತೀಡಿ ದಾರಿಗೆ ತರುತ್ತಾನೆ. ಚಲನಚಿತ್ರಗಳಲ್ಲಿ ಈ ಪ್ರಾಣಿಗಳು ಹೇಗೆ ಬೇಕೋ ಹಾಗೇ ನಟಿಸಿ, ಕುಣಿದು ಶಹಬ್ಬಾಸ್‌ಗಿರಿ ಪಡೆದು ಬಿಡುತ್ತವೆ. ಡುಲ್‌ಪಿತಕ್‌ಗೆ ಕೈತುಂಬಾ ಹಣ!

ಹಲ್ಲಿ ಜಾತಿಗೆ ಸೇರಿದ ದಕ್ಷಿಣ ಅಮೆರಿಕದ 'ಇಗ್ವಾನಾ' ಓತಿಕ್ಯಾತವೂ ಅಷ್ಟೆ. ಭಾರಿ ಗಿಟಾರ್ ವಾದಕನಂತೆ ಇಲ್ಲಿ 'ಪೋಸ್' ನೀಡಿರುವುದನ್ನು ನೋಡಿದರೆ ಎಂಥ ನಾದ ಹೊರಹೊಮ್ಮಬಹುದು ಎಂದು ಕಿವಿ ಓರೆ ಮಾಡಬೇಡಿ. ಅದು ನಟನೆಯಷ್ಟೆ. ಈ ಹಲ್ಲಿಗೆ ಗಿಟಾರ್ ವಾದಕನಂತೆ ಕೂತು ಕೈಯಲ್ಲಿ ಹಿಡಿದು ತಂತಿಯ ಮೇಲೆ ಬೆರಳಾಡಿಸುವ ತರಬೇತಿ ನೀಡಿದ್ದು ಡುಲ್‌ಪಿತಕ್. ನೆನಪಿನ ಶಕ್ತಿ ಚುರುಕಾಗಿರುವ ಈ ಓತಿಕ್ಯಾತ ಆತ ಹೇಳಿದ್ದನ್ನು ನೆನಪಿನಲ್ಲಿಟ್ಟುಕೊಂಡು ನಟಿಸುತ್ತದೆ. ಕ್ಯಾಮೆರಾ ಕಂಡ ಕೂಡಲೇ ಚಕಚಕ ಎಂದು ಗಿಟಾರ್ ಹಿಡಿದು ಓಲಾಡಲೂ ಸಿದ್ಧ. ಮಕ್ಕಳಿಗೆ ಐಸ್‌ಕ್ರೀಂ ಆಸೆ ತೋರಿಸಿದಂತೆ ಓತಿಕ್ಯಾತಕ್ಕೆ ಹುಳುಗಳ ಆಸೆ ತೋರಿಸಿ ಡುಲ್‌ಪಿತಕ್ ಹೈರಾಣಾದನಂತೆ. ಆದರೂ ಓತಿಕ್ಯಾತನ ಕೈಲಿ.. ಅಲ್ಲಲ್ಲ ಕಾಲಲ್ಲಿ ಗಿಟಾರ್ ಬಂತು, ಡುಲ್‌ಪಿತಕ್ ಕೈಗೆ ಕಾಸು ಬಂತು.

ಇದೇ ರೀತಿ ಕಪ್ಪೆ, ಕೋತಿ, ಬೆಕ್ಕು, ನಾಯಿಗಳಿಗೆಲ್ಲ ತರಬೇತಿ ನೀಡಿರುವ ಡುಲ್‌ಪಿತಕ್, 'ಮನುಷ್ಯನಿಗೆ ತರಬೇತಿ ನೀಡುವುದೇ ಕಷ್ಟದ ಕೆಲಸ. ಪ್ರಾಣಿಗಳನ್ನು ಹೇಗೆ ಬೇಕಾದರೂ ಪಳಗಿಸಬಹುದು' ಎನ್ನುತ್ತಾನಂತೆ. ಮನುಷ್ಯ ಹುಳುಗಳ ಆಸೆಗೆ ಎಲ್ಲಿ ಬಗ್ಗುತ್ತಾನೆ.. ಕೈಗೆ ಸಾಕಷ್ಟು ಕಾಂಚಾಣ ಬಿದ್ದರೆ ಬಗ್ಗಬಹುದು!

–ಎಸ್.ತುಂಬೆ



ಚಿತ್ರಗಳು: ರಾಯಿಟರ್ಸ್

